1	2	3	4	5
128.	ಸ್ವೀಪರ್ ವಾಚ್‌ಮೆನ್	529	237	292
129.	ಕ್ಲೀನರ್	447	159	288
130.	ಆಟೋ ಎಲೆಕ್ಟ್ರೀಷಿಯನ್	1	0	1
131.	ದಫೇದಾರ್	22	13	9
132.	ದಫ್ತರಿ	439	379	60
133.	ಕಛೇರಿ ಪರಿಚಾರಕ ದರ್ಜೆ - 1	89	41	48
134.	ಕಛೇರಿ ಪರಿಚಾರಕ ದರ್ಜೆ -2	895	720	175
135.	ವಾಚ್‌ಮೆನ್ (ಕಛೇರಿ)	149	87	62
136.	ಯಾರ್ಡ್/ಕ್ಲೀನರ್	82	71	11
137.	ಯಾರ್ಡ್ ಕೀಪರ್/ಕ್ಲೀನರ್	82	71	11
138.	ಮೀಟರ್ ರಿಫೇರರ್	5	5	0
139.	ಆರ್ಮಡ್ ಪೊಲೀಸ್	3	0	3
140.	ಎ.ಎಲ್.ಎಂ. ವರ್ಕ್ಸ್	77	59	18
141.	ಸೂಪರ್ ನ್ಯೂಮರೆರಿ ಪೋಸ್ಟ್	34	33	1
142.	ಸ್ಕೂಲ್ ಟೀಚರ್	1	1	0
143.	ಆಯಾ (ಸ್ಕೂಲ್)	3	2	1
144.	ಆಟೋ ಕ್ಲೀನರ್	1	0	1
145.	ಮೆಕ್ಯಾನಿಕ್ ದರ್ಜೆ -11 (ನೀರು ಪೂರೈಕೆ)	4	1	3
	ಒಟ್ಟು	**59486**	**40442**	**19044**

ಚಾಮರಾಜನಗರದಲ್ಲಿ 220 ಕೆ.ವಿ. ವಿದ್ಯುತ್ ಕೇಂದ್ರದ ಮಂಜೂರಾತಿ

4467 - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮಾರನಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ 220 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಚಾಮರಾಜನಗರ ರೈತರ ವಿದ್ಯುತ್ ಸಮಸ್ಯೆಯನ್ನು ನಿವಾರಣೆ ಮಾಡಲು ವಿದ್ಯುತ್ ಕೇಂದ್ರದ ಕಾಮಗಾರಿಯನ್ನು ಆರಂಭಿಸುವುದು ಯಾವಾಗ, ಕಾಮಗಾರಿಯನ್ನು

ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು, ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣದ ಅಂದಾಜು ವೆಚ್ಚವೆಷ್ಟು ?

ಇ) ಚಾಮರಾಜನಗರ ತಾಲ್ಲೂಕು ಸಂತೆಮರಹಳ್ಳಿ ಕ್ಷೇತ್ರ ವ್ಯಾಪ್ತಿಗೆ ಬರುವ ಚಂದಕವಾಡಿ ಮತ್ತು ನಂಜನಗೂಡು ತಾಲ್ಲೂಕು ದೇವನೂರು ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರಗಳಿಗೆ ಹೆಚ್ಚುವರಿಯಾಗಿ 6.3 ಎಂ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಈ) ಸಂತೇಮರಹಳ್ಳಿ ಚಂದಕವಾಡಿ ಹಾಗೂ ದೇವನೂರು ವಿದ್ಯುತ್ ಉಪ-ಕೇಂದ್ರಗಳಲ್ಲಿ ಫೀಡರ್ ಲೈನ್ ಕಾಮಗಾರಿಯನ್ನು ಸಮರ್ಪಕವಾಗಿ ಪೂರ್ಣಗೊಳಿಸಲಾಗಿದೆಯೇ ? ಫೀಡರ್ ಲೈನ್‌ಗಳ ವಿವರ ನೀಡುವುದು ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಆಡಳಿತಾತ್ಮಕ ಮಂಜೂರಾತಿಯನ್ನು ಫೆಬ್ರವರಿ 99ರಲ್ಲಿ ನೀಡಲಾಗಿದೆ.

ಆ) ಸದರಿ ಕಾಮಗಾರಿ ಕೆಲಸವನ್ನು 'ಟರ್ನ್ ಕೀ' ಆಧಾರದ ಮೇಲೆ ಕೈಗೊಂಡಿದ್ದು, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ನಿರ್ಮಾಣ ಕಾರ್ಯವನ್ನು 2001-2002ರ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯನ್ನು ಹೊಂದಲಾಗಿದೆ. ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ 43.63 ಕೋಟಿ ರೂಪಾಯಿಗಳು.

ಇ) ಚಾಮರಾಜನಗರ ತಾಲ್ಲೂಕಿನ ಚಂದಕವಾಡಿಯಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್ನಿನಲ್ಲಿ ಒಂದು 5 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ ಸ್ಥಾಪಿಸುವ ಕಾರ್ಯವು ಪ್ರಗತಿಯಲ್ಲಿದೆ. ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದಲ್ಲಿರುವ 66:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನಲ್ಲಿ ಇನ್ನೊಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯ ದೊರೆತ ನಂತರ, ಈ ನಿಟ್ಟಿನಲ್ಲಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಈ) ಸಂತೇಮರಹಳ್ಳಿಯಲ್ಲಿರುವ 66:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನಲ್ಲಿ ಪ್ರಸ್ತುತ 7 ಫೀಡರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಸದರೀ, ಸಬ್-ಸ್ಟೇಷನ್ನಿನಲ್ಲಿ ಹೆಚ್ಚುವರಿ ಫೀಡರುಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ. ಚಂದಕವಾಡಿಯಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಲ್ಲಿ ಪ್ರಸ್ತುತ 3 ಫೀಡರುಗಳು ಕಾರ್ಯ ನಿರ್ವಹಿಸುತ್ತಿವೆ. ಇದರ ಜೊತೆಗೆ ಇನ್ನೂ 3 ಫೀಡರುಗಳನ್ನು ಹೆಚ್ಚುವರಿಯಾಗಿ ನಿರ್ಮಾಣ ಮಾಡಿ ಚಾಲನೆಗೊಳಿಸಲಾಗುತ್ತದೆ.

ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿರುವ 66:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನಲ್ಲಿ ಪ್ರಸ್ತುತ 3 ಫೀಡರುಗಳು ಕಾರ್ಯನಿರ್ವಹಿಸುತ್ತಿವೆ. ಇದರ ಜೊತೆಗೆ ಇನ್ನೂ 3 ಹೆಚ್ಚುವರಿ ಫೀಡರು-

ಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಸಂತೇಮರಹಳ್ಳಿ, ಚಂದಕವಾಡಿ ಹಾಗೂ ದೇವನೂರು ಗ್ರಾಮಗಳಲ್ಲಿರುವ ವಿದ್ಯುತ್ ಸಬ್ ಸ್ಟೇಷನ್ನುಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಫೀಡರುಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ಸಂತೇಮರಹಳ್ಳಿ ಚಂದಕವಾಡಿ ಮತ್ತು ದೇವನೂರು ವಿದ್ಯುತ್ ಉಪಕೇಂದ್ರಗಳಲ್ಲಿರುವ ಫೀಡರುಗಳ ವಿವರಗಳು

ಕ್ರಮ ಸಂಖ್ಯೆ	ವಿದ್ಯುತ್ ಉಪಕೇಂದ್ರದ ಹೆಸರು	ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಫೀಡರುಗಳು
1.	ಸಂತೇಮರಹಳ್ಳಿ	ಎಫ್-1 - ಸಂತೇಮರಹಳ್ಳಿ ಲೋಕಲ್
		ಎಫ್-2 - ಆಲದೂರು
		ಎಫ್-3 - ಮಂಗಳ
		ಎಫ್-4 - ಕುದೇರು
		ಎಫ್-5 - ಯಳಂದೂರು
		ಎಫ್-6 - ಬಿ.ಆರ್. ಹಿಲ್ಸ್
		ಎಫ್-7 - ಸಂತೇಮರಹಳ್ಳಿ
2.	ಚಂದಕವಾಡಿ	ಎಫ್-1- ಚಂದಕವಾಡಿ
		ಎಫ್-2 - ಬಂದರಬಾಳು
		ಎಫ್-3 - ಹೆಬ್ಬಸೂರು
3.	ದೇವನೂರು	ಎಫ್-1 - ಬನ್ನಾರಿ ಷುಗರ್ಸ್ ಮತ್ತು ತಗಡೂರು
		ಎಫ್-2 - ಬದನವಾಳು
		ಎಫ್-3- ಕೌಲಂದೆ ಮತ್ತು ಚುಂಚನಹಳ್ಳಿ.

ಭಾರಿ ಮಳೆಯಿಂದಾಗಿ ಸುವರ್ಣಾವತಿ ಜಲಾಶಯದ ಅಚ್ಚುಕಟ್ಟು ಪ್ರದೇಶದ ರಸ್ತೆಗಳು ಹಾನಿಯಾದ ಬಗ್ಗೆ

4469 - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮಾರನಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮರಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುವರ್ಣಾವತಿ ಜಲಾಶಯದ ಅಣೆಕಟ್ಟು ನಾಲೆಗಳ ಏರಿಗಳು, ರಸ್ತೆಗಳು ಹಾಗೂ ಕೆರೆ ಏರಿಗಳು ಅಚ್ಚುಕಟ್ಟು ರಸ್ತೆಗಳು ಭಾರಿ